ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಮಾತು ಕತೆ



## ಕೊಡಗು

Volume 1 | Dec 2022

## ಕೂಡುಮಂಗಳೂರು ಗ್ರಾಮ ಪಂಚಾಯಿತಿ



### ಅಧ್ಯಕ್ಷರ ಸಂದೇಶ (ಪ್ರಕಾಶಕರು)

ನಮ್ಮ ಗ್ರಾಮ ಪಂಚಾಯತಿಯನ್ನು ಮಾದರಿ ಗ್ರಾಮ ಪಂಚಾಯಿತಿ ಯಾಗಿಸುವ ನಿಟ್ಟಿನಲ್ಲಿ ಈಗಾಗಲೇ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗ್ರಾಮ ಮಟ್ಟದಲ್ಲಿ ಮಹಿಳಾ ಒಕ್ಕೂಟಗಳ ಸಹಕಾರದೊಂದಿಗೆ ಸೂಕ್ತ ರೀತಿಯಲ್ಲಿ ಸ್ವಚ್ಛ ಸಂಕೀರ್ಣಗಳನ್ನು ನಿರ್ವಹಿಸಲಾಗುತ್ತಿದೆ.

ಗ್ರಾಮಪಂಚಾಯಿತಿ ಜನಪ್ರತಿನಿಧಿ ವರ್ಗ ಮತ್ತು ಸಿಬ್ಬಂದಿ ವರ್ಗದವರು ಸರ್ಕಾರದ ಪ್ರತಿಯೊಂದು ಯೋಜನೆಯನ್ನು ಜನರ ಬಳಿ ತಲುಪಿಸುವಲ್ಲಿ ಸಾಕಷ್ಟು ಶ್ರಮ ವಹಿಸಲಾಗುತ್ತಿದೆ. ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

**ಶ್ರೀಮತಿ ಬಿ.ಜಿ.ಇಂದಿರಾ ರಮೇಶ್**



### ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂದೇಶ

ಕೊಡಗು ಜಿಲ್ಲೆಯಾದ್ಯಂತ ಅತಿ ಹೆಚ್ಚು ಒತ್ತು ನೀಡಿ ಸಂಜೀವಿನಿ ಒಕ್ಕೂಟದ ಮಹಿಳೆಯರನ್ನು ಪ್ರೋತ್ಸಾಹಿಸ ಲಾಗುತ್ತಿದೆ. ಇದರ ಪ್ರಮುಖ ಭಾಗವಾಗಿ ಕಸ ಸಂಗ್ರಹಣೆಯಲ್ಲಿ ಆದಾಯದ ಮೂಲವನ್ನು ಗಳಿಸುವ ನಿಟ್ಟಿನಲ್ಲಿ ಮಹಿಳಾ ಒಕ್ಕೂಟಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಮಾನ್ಯ ಸರ್ಕಾರದ ಮಾರ್ಗದರ್ಶನದಂತೆ ಮನೆ ಮನೆಗೆ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಸರ್ಕಾರದಿಂದ ಸಿಗುವ ಸೌಲಭ್ಯವನ್ನು ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ನಮ್ಮ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸಹಯೋಗದಲ್ಲಿ ಮಾಡಲಾಗಿದೆ.

**ಡಾ. ಆಕಾಸ್**(ಭಾ.ಆ.ಸೇ.)



### ಪಿಡಿಒ ಅವರ ಸಂದೇಶ (ಪ್ರಕಾಶಕರು)

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರ ಸೂಚಿಸುವ ಎಲ್ಲಾ ಕಾರ್ಯಕ್ರಮವನ್ನು ಚಾಚು ತಪ್ಪದೇ ಅನುಷ್ಠಾನಿಸಲಾಗುತ್ತಿದೆ. ಸಾರ್ವಜನಿಕರ ಸಹಭಾಗಿತ್ವದಲ್ಲಿ ಮತ್ತು ಆಡಳಿತ ಮಂಡಳಿ ಸಹಯೋಗದಲ್ಲಿ ಯೋಜನೆಗಳನ್ನು ಮನೆಮನೆಗೆ ತಲುಪಿಸುತ್ತಿದ್ದೇವೆ. ಇದರ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದರ ಜೊತೆಗೆ, ಸರ್ಕಾರದ ಸಹಾಯಧನವನ್ನು ಫಲಾನುಭವಿಗಳಿಗೆ ಒದಗಿಸುವ ಮಹತ್ವ ಕೆಲಸವನ್ನು ನಿಷ್ಠೆಯಿಂದ ಮಾಡಲು ಒಂದು ಸದಾವಕಾಶ ದೊರಕಿದೆ.

**ಶ್ರೀ ಸಂತೋಷ್.ಎಂ.ಆರ್**

### MGNREGA





#### ಎರೆಹುಳು ತೊಟ್ಟಿ ನಿರ್ಮಾಣದಿಂದ ಹಸನಾದ ರೈತನ ಬದುಕು: ರಾಸಾಯನಿಕ ಮುಕ್ತ ಬೆಳೆ ಬೆಳೆದ ಮಾದರಿ ರೈತ

ನನ್ನ ಹೆಸರು ಯಾಲಕ್ಕಿ ಗೌಡ. ಮೂಲತಃ ವ್ಯವಸಾಯವನ್ನೇ ನಂಬಿ ಬದುಕು ನಡೆಸುತ್ತಿದ್ದೇನೆ. ನನಗೆ ಗ್ರಾಮ ಪಂಚಾಯಿತಿಯಿಂದ ಎರೆಹುಳ ಗೊಬ್ಬರ ತೊಟ್ಟಿ ಮಾಡಲು ಉತ್ತೇಜನ ನೀಡಿದರು.

ಇದರ ಬಗ್ಗೆ ನಾನು ಹೆಚ್ಚು ಗಮನ ಹರಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಎರೆಹುಳು ತೊಟ್ಟಿಯನ್ನು ನಿರ್ಮಾಣ ಮಾಡಿಕೊಂಡೆ.

ಇದರಿಂದ ಕಪ್ಪುಬಂಗಾರ ಎಂದು ಕರೆಯಲ್ಪಡುವ ಎರೆಹುಳು ಗೊಬ್ಬರವನ್ನು ಸ್ವತಃ ನಾನೇ ತಯಾರಿಸಿ, ನಮ್ಮ ಜಮೀನಿಗೆ ಹಾಕಿ ಉತ್ತಮ ಬೆಳೆಯೊಂದಿಗೆ ಒಳ್ಳೆಯ ಆದಾಯವನ್ನು ಗಳಿಸಿಕೊಂಡಿದ್ದೇನೆ.

### ನೇಮಕಾತಿ ಪ್ರಕಟಣೆ

ಕೊಡಗು ಜಿಲ್ಲೆಯ MGNREGS ಯೋಜನೆ ಅಡಿ ಹೊರಗುತ್ತಿಗೆ ಆಧಾರ ದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಹೆಚ್ಚು ಇಚ್ಛೆ ಉಳ್ಳವರು ಕೆಳಕಂಡ ಲಿಂಕ್ ಬಳಸಿ

https://kodagu.nic.in/notice_category

### ಮಹಿಳೆಯರ ಬದುಕಿಗೆ "ಸಂಜೀವಿನಿ"







ಕೂಡುಮಂಗಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಲ್ಪಿಸಕೊಡುವ ನಿಟ್ಟಿನಲ್ಲಿ ಒಂದು ಸಂಜೀವಿನಿ ಒಕ್ಕೂಟವನ್ನು ರಚನೆ ಮಾಡಲಾಯಿತು.

ಪಂಚಾಯಿತಿಯಿಂದ ಕಸ ಸಂಗ್ರಹಣೆ ಮತ್ತು ವಿಂಗಡಣೆಯಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರನ್ನೇ ತೊಡಗಿಸಿಕೊಂಡು ಅದರಿಂದ ಬರುವ ಆದಾಯವನ್ನು ಸಂಜೀವಿನಿ ಒಕ್ಕೂಟದ ಸದಸ್ಯರ ವೇತನವಾಗಿ ಪರಿವರ್ತನೆ ಮಾಡಿಕೊಂಡು ಕಸ ಮುಕ್ತ ಗ್ರಾಮ ಪಂಚಾಯಿತಿಯನ್ನು ನಿರ್ಮಾಣ ಮಾಡಲಾಯಿತು.

ಕಸದಿಂದ ಆದಾಯಗಳಿಸುವಲ್ಲಿ ಒಂದು ಹೆಜ್ಜೆ ಮುಂದೆ. ಒಟ್ಟು ಮಹಿಳೆ ಯಾವಾಗಲೂ ಸದೃಢಳು ಎಂದು ತೋರಿಸಲು ಚಾಲಕನ ವೃತ್ತಿಯನ್ನು ಸಹ ಮಹಿಳೆಯರೇ ನಿರ್ವಹಿಸಿ ಇತರೆ ಗ್ರಾಮ ಪಂಚಾಯಿತಿಗೆ ಮಾದರಿಯಾಗಿದ್ದಾರೆ.

### ಸಾಂಕ್ರಾಮಿಕ ರೋಗಗಳಿಗೆ, ಬಚ್ಚಲು ಗುಂಡಿ ಅಸ್ತ್ರ ಪ್ರಯೋಗ: ಪ್ರತಿ ಮನೆಯೂ ಈಗ ಸಾಂಕ್ರಾಮಿಕ ಮುಕ್ತ





ಮೊದಲು ಈ ಬಚ್ಚಲು ಗುಂಡಿ ಎಂದರೇನು? ಅದರಿಂದ ನಮಗೇನು ಉಪಯೋಗ ಎಂಬ ಬಗ್ಗೆ ಬಹಳಷ್ಟು ಗೊಂದಲಗಳಿದ್ದವು. ಗ್ರಾಮಪಂಚಾಯಿತಿ ವತಿಯಿಂದ ಮಾಹಿತಿ ನೀಡಿದ ಸಂದರ್ಭದಲ್ಲಿ ನಮ್ಮ ಮನೆಗಳಲ್ಲಿ ಇದರ ಅಗತ್ಯತೆ ಇದೆಯೇ ಎನಿಸುತ್ತು. ಆದರೆ ನಮ್ಮ ಮನೆಯ ಸುತ್ತ-ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಲು ಮತ್ತು ಗ್ರಾಮವನ್ನು ಸಾಂಕ್ರಾಮಿಕ ಮುಕ್ತವಾಗಿಸಲು ಇಂಗುಗುಂಡಿಗಳು ಬಹಳಷ್ಟು ಸಹಕಾರಿಯಾದವು. ಮನೆಯ ಬದಿಯಲ್ಲಿ ಹರಿಯುತ್ತಿದ್ದ ಬಟ್ಟೆ, ಪಾತ್ರೆ ಮತ್ತು ಸ್ನಾನದ ನೀರು ವೈಜ್ಞಾನಿಕವಾಗಿ ಇಂಗುವಂತೆ ಮಾಡುವಲ್ಲಿ ಈ ಬಚ್ಚಲುಗುಂಡಿಗಳು ಸಾಕಷ್ಟು ಸಹಕಾರಿಯಾದವು.

**– ಗ್ರಾಮಸ್ಥರು**

### ಜನ-ಮನದೊಂದಿಗೆ ಬೆರೆತ ಜನಸ್ನೇಹಿ ಪಂಚಾಯಿತಿ.



ಕೂಡುಮಂಗಳೂರು ಗ್ರಾಮ ಪಂಚಾಯಿತಿ ಕೊಡಗಿನ ಅತಿ ದೊಡ್ಡ ಪಂಚಾಯಿತಿಯಾಗಿದೆ. ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಜನಸ್ನೇಹಿಯಾಗಿ ಮತ್ತು ಜನರ ದೂರು ದುಮ್ಮಾನಗಳನ್ನು ಆಗಿಂದಾಗಲೇ ಆಲಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಡುತ್ತಾರೆ ಯಾವುದೇ ಕೆಲಸವನ್ನು ಸಕಾಲದಲ್ಲೇ ಮಾಡಿ ಜನರ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿಗೆ ಬರುವ ಸೌಲಭ್ಯ ಮತ್ತು ಯೋಜನೆಗಳ ಬಗ್ಗೆ ಸ್ವಚ್ಛ ವಾಹಿನಿಯ ಮೂಲಕ ಮನೆ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ಸಹ ಮಾಡಲಾಗುತ್ತಿದೆ. ಹಲವಾರು ಬಹುಮಾನಗಳಿಗೆ ಮತ್ತು ಪ್ರಶಸ್ತಿಗಳಿಗೆ ಕೂಡುಮಂಗಳೂರು ಗ್ರಾಮಪಂಚಾಯಿತಿ ಭಾಜನವಾಗಿದೆ.
ಇದು ಗ್ರಾಮಸ್ಥರ ಹೆಮ್ಮೆಯ ಪಂಚಾಯತಿ ಎಂದು ಹೇಳುವುದು ನನಗೆ ಹೆಮ್ಮೆಯ ವಿಷಯವಾಗಿದೆ.

### ಗ್ರಂಥಾಲಯ ಡಿಜಿಟಲೀಕರಣ






ಕೂಡುಮಂಗಳೂರು ಗ್ರಾಮ ಪಂಚಾಯಿತಿಯಲ್ಲಿ ಸಕಲ ವ್ಯವಸ್ಥೆಗಳನ್ನು ಒಳಗೊಂಡಿರುವ ಸುಸಜ್ಜಿತ ಗ್ರಂಥಾಲಯವನ್ನು ನಿಮರ್ಮಿಸಲಾಗಿದೆ .

ಓದುಗರನ್ನು ಮತ್ತು ಮಕ್ಕಳನ್ನು ಈ ಗ್ರಂಥಾಲಯ ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುತ್ತಿದೆ. ಗ್ರಂಥಾಲಯದಲ್ಲಿನ ಸುಸಜ್ಜಿತ ಆಸನ ವ್ಯವಸ್ಥೆಗಳು ಎಲ್ಲರನ್ನೂ ಗ್ರಂಥಾಲಯಗಳತ್ತ ಸೆಳೆಯುತ್ತಿದೆ.

ಕೈಬೀಸಿ ಕರೆಯುವ ಹಾಗೂ ಉತ್ತಮ ಕಲಾಗೃತಿ ಒಳಗೊಂಡ ಸುಸಜ್ಜಿತ ಗ್ರಂಥಾಲಯ ಮಾಡಲಾಗಿದೆ. ಇದರ ಜೊತೆಗೆ ಪಂಚಾಯತ್ ರಾಜ್ ಇಲಾಖೆಯ ಮಾಹಿತಿಯನ್ನು ಸಹ ಸಾರ್ವಜನಿಕರಿಗೆ ತಲುಪಿಸುವ ಕಾರ್ಯವಾಗಿದೆ. ಈಗಾಗಲೇ ಓದುವ ಬೆಳಕು ಅಭಿಯಾನದಡಿಯಲ್ಲಿ ಗ್ರಾ.ಪಂ. ವ್ಯಾಪ್ತಿಯ ಎಲ್ಲಾ ವಿದ್ಯಾರ್ಥಿಗಳನ್ನು ಉಚಿತವಾಗಿ ನೋಂದಣಿ ಮಾಡಲಾಗಿದೆ. ಶಾಲೆ ಬಿಟ್ಟ ಬಳಿಕ ಹಲವಾರು ಮಕ್ಕಳು ನಮ್ಮ ಡಿಜಿಟಲ್ ಗ್ರಂಥಾಲಯಕ್ಕೆ ಆಗಮಿಸುತ್ತಾರೆ.

ಗ್ರಂಥಪಾಲಕರ ಸಹಕಾರದೊಂದಿಗೆ ಮಕ್ಕಳು ಕಂಪ್ಯೂಟರ್ ಬಳಕೆಯ ಕುರಿತು ಅರಿವನ್ನು ಪಡೆಯುತ್ತಿದ್ದಾರೆ. ಇದರೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ಯುವ ವರ್ಗಕ್ಕೆ ಪಂಚಾಯಿತಿಯಲ್ಲಿ ದೊರೆಯುವ ಪುಸ್ತಕಗಳು ಮತ್ತು ಕಂಪ್ಯೂಟರ್‌ಗಳು ಆಸರೆಯಾಗಿವೆ. ಒಟ್ಟಾರೆಯಾಗಿ ಸರ್ಕಾರದ ಆಶಯದಂತೆ ನವಭಾರತದ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡಿಜಿಟಲ್ ಗ್ರಂಥಾಲಯಗಳು ಪ್ರೇರಕ ಶಕ್ತಿಯಾಗಿದೆ.

### ರೇಷ್ಮೆ ಕೃಷಿಯಲ್ಲಿ ಹರ್ಷ ಕಂಡ ರೈತ





ಅಂಗವೈಕಲ್ಯತೆಯನ್ನು ಬದಿಗೊತ್ತಿ, ಕೃಷಿಯಲ್ಲಿ ಯಶಸ್ಸು ಕಂಡವರು ಕೂಡುಮಂಗಳೂರು ಗ್ರಾಮಪಂಚಾಯಿತಿಯ ಗಣೇಶ. ಗ್ರಾಮ ಪಂಚಾಯಿತಿ ವತಿಯಿಂದ ಮತ್ತು ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ಶೂನ್ಯ ಬಂಡವಾಳದಲ್ಲಿ ರೇಷ್ಮೆ ಬೆಳೆಯನ್ನು ಬೆಳೆದು ಒಂದು ಬೆಳೆಗೆ ಅಂದಾಜು ಮೂರು ಲಕ್ಷದವರೆಗೆ ಆದಾಯವನ್ನು ಗಳಿಸುತ್ತಿದ್ದಾರೆ.

ಗ್ರಾಮ ಪಂಚಾಯಿತಿಯೊಂದಿಗಿನ ನಿಕಟ ಸಂಪರ್ಕ ಮತ್ತು ಕೃಷಿಯಲ್ಲಿನ ಶ್ರದ್ಧೆಯಿಂದಾಗಿ ಇಂದು ಯಶಸ್ವಿ ರೈತರಾಗಿ ಹೊರಹೊಮ್ಮಿದ್ದಾರೆ. ಇದರೊಂದಿಗೆ ಇತರ ಯುವ ಕೃಷಿಕರಿಗೂ ಮಾದರಿಯಾಗಿದ್ದಾರೆ